# ಪ್ರಥಮ ಬಿ.ಬಿ.ಎಂ ಪದವಿ ಪರೀಕ್ಷೆ

## ಆಗಸ್ಟ್ / ಸೆಪ್ಟಂಬರ್ 2011

## ಅಂಚೆ ಮತ್ತು ತೆರಪಿನ ಶಿಕ್ಷಣ

### ಕನ್ನಡ ಭಾಷಾ ಪತ್ರಿಕೆ – ೧

(ಪಠ್ಯಗಳು: ಪ್ರಾಚೀನ ಕನ್ನಡ ಕಾವ್ಯ – ೨, ಹೊಸಗನ್ನಡ ಕಾವ್ಯ – ೨, ಹೊಸಗನ್ನಡ ಕಥಾ ಸಾಹಿತ್ಯ – ೧, ಹೊಸಗನ್ನಡ ಪ್ರಬಂಧ ಸಾಹಿತ್ಯ – ೧, ಬಳಕೆಯ ಭಾಷೆ)

*ಸಮಯ: 3 ಗಂಟೆಗಳು]* *[ಅಂಕಗಳು : 70 /80*

1. ಅ) ಒಂದರ ಭಾವ ಸ್ವಾರಸ್ಯವನ್ನು ವಿವರಿಸಿ. **04 ಅಂಕಗಳು**

೧) ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮಿಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್

೨) ಚಿನ್ನವನು ತೆಗೆಯೋರು ಅನ್ನವನು ಕಾಣದೋರು
ಬಟ್ಟೆಯನ್ನು ನೇಯೋರು ಬರಿಮೈಲೇ ಹೋಗೋರು
ಹೇಳಿದಂತೆ ಕೇಳುತಾರೆ ನನ್ನ ಜನಗಳು
ಗಾಳಿಯಲ್ಲ ಬಾಳುತಾರೆ ನನ್ನ ಜನಗಳು.

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ **04 ಅಂಕಗಳು**

ಶಿಖಿ, ಕರ್ದಮ, ಅಡಗು, ಬಳರಿ, ಸಮ್ಮಗಾರ, ತೃಷೆ,
ಬೆಸ, ಗೇಹ, ಪೂಣ್ಕೆ, ನೆಪ್ಪು, ಬಿತ್ತು, ರಸನೆ,

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. **04 ಅಂಕಗಳು**

೧) ವೀರಬಾಹು, ೨) ನಕ್ಷತ್ರಿಕ, ೩) ಚಂಡಕರ್ಮ.

2. ನಾಲ್ಕಕ್ಕೆ ಸಂದರ್ಭ ಸೂಚಿಸಿ. ಸ್ವಾರಸ್ಯವನ್ನು ವಿವರಿಸಿ : **12 ಅಂಕಗಳು**

೧) ನೀಂ ಕ್ರಮ ವಿಪರ್ಯಯಂ ಮಾಡುವುದೇ

೨) ತನ್ನ ನೂಲು ತನ್ನನೇ ಸುತ್ತಿ ಸಾವಂತೆ

೩) ನೆಲೆಗೆಟ್ಟು ಬಂದವರ್ಗೆ ಮುನಿಯದವರಾರೆಂದನು

೪) 'ಇದು ಬರೀ – ಬೆಳಗಲ್ಲೊ ಅಣ್ಣಾ'

೫) ಅಮಾಸೇಲಿ ಅತ್ತಿಸ್ದಂತೆ ಒಂದ್‌ನೂರ್ ಮತಾಪ

೬) ಹೌದಿವೇ ಕೈಗಳು: ಬಲಿಷ್ಠ ಕಪ್ಪು

*ಮುಂದುವರೆದಿದೆ. . . . . . .2*

65

3. ಗ) ಮಾರಿದತ್ತನ ಮನಃ ಪರಿವರ್ತನೆಯಾದ ಬಗೆಯಾನ್ನು ವಿವರಿಸಿ. 08 ಅಂಕಗಳು

ಅಥವಾ

ಬಿ) ಹರಿಶ್ಚಂದ್ರ ಕಾವ್ಯದ ಮೂಲಕ ಕವಿ ತಿಳಿಸ ಬಯಸಿರುವ ಮೌಲ್ಯವನ್ನು ಕುರಿತು ಬರೆಯಿರಿ.

4. ಗ) ತಾನಾಜಿಯ ಪಾತ್ರವನ್ನು ವಿವರಿಸಿ. 08 ಅಂಕಗಳು

ಬಿ) ರಂಗವಲ್ಲಿಯ ಪ್ರಸಂಗದಿಂದ ನಿರೂಪಕನು ಎದುರಿಸಬೇಕಾದ ಪೇಚಾಟವನ್ನು ವಿವರಿಸಿ.

5. ಗ) ಆಧುನಿಕತೆಯ ಪ್ರವೇಶದಿಂದ ಗ್ರಾಮೀಣ ಪ್ರದೇಶದಲ್ಲುಂಟಾಗುವ ಸ್ಥಿತ್ಯಂತರವನ್ನು ತೇಜಸ್ವಿಯವರು ಕಲಾತ್ಮಕವಾಗಿ ನಿರೂಪಿಸಿರುವ ಬಗೆ ಹೇಗಿದೆ ? – ವಿವೇಚಿಸಿ. 10 ಅಂಕಗಳು

ಅಥವಾ

ಬಿ) ಕಿವುಡ ನಾಯಿಯಾಗುವ ಬದುಕಿನ ದುರಂತವನ್ನು ಕುರಿತು ಬರೆಯಿರಿ.

6. ಗ) "ಹರಕೆಗಳು ಕಷ್ಟಕಾಲಕ್ಕೆ ಈಜು ಬುರುಡೆಗಳಾಗಿ ಸಹಾಯಕ್ಕೆ ಬರುತ್ತವೆ" ಈ ಹೇಳಿಕೆಯನ್ನು ಪ್ರಬಂಧದ ಆಧಾರದಿಂದ ವಿವೇಚಿಸಿ. 10 ಅಂಕಗಳು

ಅಥವಾ

ಬಿ) ಚಿಲಿಪಿಲಿ ಗಾನಕ್ಕೆ ಬೆಲೆ ಕೊಡಬೇಕಾದುದು ಏಕೆ? ವಿವರಿಸಿ.

7. ಅ) ವಾಣಿಜ್ಯ ಭಾಷೆ ಎಂದರೇನು ? ವಿವರಿಸಿ. 02 ಅಂಕಗಳು

ಆ) ಅಭ್ಯರ್ಥನ ಪತ್ರದ ಮಾದರಿ ರಚಿಸಿ 03 ಅಂಕಗಳು

8. ಅ) ಶರೀರ ಭಾಷೆಯಲ್ಲಿ ಬಳಕೆಯಾಗುವ ಅಂಗಗಳನ್ನು ಹೆಸರಿಸಿ 02 ಅಂಕಗಳು

ಆ) "ಹೊಸ ವೈದ್ಯನಿಗಿಂತ ಹಳೇ ರೋಗಿ ಮೇಲು" ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. 03 ಅಂಕಗಳು

**(80 ಅಂಕಗಳ ಸ್ಕೀಮ್ ನವರಿಗೆ ಕಡ್ಡಾಯ ಪ್ರಶ್ನೆ)**

9. **ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ.**

ಅ) ಚಂದ್ರಶೇಖರ ಆಲೂರರು ಜಾತಿ ತಾರತಮ್ಯವನ್ನು ಅನುಭವಿಸಿದ ಪರಿಯನ್ನು ವಿವರಿಸಿ. 10 ಅಂಕಗಳು

ಅಥವಾ

ಆ) 'ಏಳು ದೆವ್ವಗಳು' ಕಥಾನಕದ ಮೂಲಕ ಪ್ರಬಂಧಕಾರರು ಏನು ಹೇಳುತ್ತಿದ್ದಾರೆ? ವಿವರಿಸಿ.

* * * * * *

66